ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.3360/2024

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಸುದೀಪ್** | | |
| **ತಂದೆಃಹೆಸರು** | **ಕರಿಯಪ್ಪ** | **ಪಿಡಬ್ಲೂಃ** | **7** |
| **ವಯಸ್ಸು** | **20 ವರ್ಷ** | **ಸಿಡಬ್ಲೂಃ** | **11** |
| **ಉದ್ಯೋಗಃ** | **ಮೇಷನ್ ಕೆಲಸ** | | |
| **ವಾಸ ಸ್ಥಳಃ** | **ಜವಳಗೆರಾ.** | | |

**ದಿನಾಂಕ 29-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಚಾಸಾ-1, 10, 12 ರವರ ಪರಿಚಯ ಇದೆ. ಮೃತ ಹರೀಶ್ ರವರ ಪರಿಚಯ ಇದೆ. ದಿ.07-09-2024 ರಂದು ಮ. 3-30 ರಿಂದ 4 ಗಂಟೆಯ ಸುಮಾರಿಗೆ ಕ್ರೂಷರ್ ನಲ್ಲಿ ನಾನು, ಮೃತ ಹರೀಶ್, ಚಾಸಾ-1 ರವರು ಹರಿಹರಕ್ಕೆ ಹೊರಟಿದ್ದೆವು, ಆಗ ಸಿಂಧನೂರಿನ ಎಂ ಕೆ ಬಟ್ಟೆ ಅಂಗಡಿಯ ಹತ್ತಿರ ಬಟ್ಟೆ ತೆಗೆದುಕೊಳ್ಳಲು ಕ್ರೂಷರ್‌ನ್ನು ನಿಲ್ಲಿಸಿದ್ದು, ಸಂ.5-30 ಕ್ಕೆ ಹರೀಶನು ರಸ್ತೆ ದಾಟುತ್ತಿದ್ದಾಗ ಒಂದು ಕ್ರೂಷರ್ ವಾಹನ ಜವಳಗೆರಾದಿಂದ ಕಾರಟಗಿ ಕಡೆಗೆ ಹೋಗುವಾಗ ಹರೀಶನಿಗೆ ಟಕ್ಕರ್ ಕೊಟ್ಟ ಕಾರಣ ಅಪಘಾತವಾಗಿ, ಆತನಿಗೆ ಗಾಯಗಳಾಗಿದ್ದವು, ನಾವು ಆತನನ್ನು ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದು, ನಂತರ ಬಳ್ಳಾರಿ & ಬೆಂಗಳೂರಿಗೆ ಹೋಗಿ ಚಿಕಿತ್ಸೆ ಪಡೆದು ಬಂದಿದ್ದನು. ಕೆಲವು ದಿನಗಳ ನಂತರ ಆತನಿಗೆ ಆರೋಗ್ಯದಲ್ಲಿ ಏರುಪೇರಾಗಿ ಮೃತಪಟ್ಟಿರುತ್ತಾನೆ. ಆ ಕ್ರೂಷರ್ ವಾಹನವನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ಅಪಘಾತ ಪಡಿಸಿದ್ದನು, ಆತನ ಹೆಸರು ಹುಸೇನ್. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದರು, ನಾನು ಈ ಬಗ್ಗೆ ಹೇಳಿಕೆ ಕೊಟ್ಟಿದ್ದೆನು.

ಅಪಘಾತವಾದ ಸಮಯದಲ್ಲಿ ಅಪಘಾತವಾಗುತ್ತಿರುವ ದೃಶ್ಯಾವಳಿಗಳನ್ನು ಸಿಡಿಯಲ್ಲಿ ರೆಕಾರ್ಡ್ ಮಾಡಿದ ವೀಡಿಯೋಗಳನ್ನು ಲ್ಯಾಪ್ ಟಾಪ್ ಮುಖಾಂತರ ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಸದರಿ ಸಿಡಿಯನ್ನು ನಿಪಿ-13 ಎಂದು, 2 ದೃಶ್ಯಾವಳಿಗಳನ್ನು ನಿಪಿ-13 ಎ & ಬಿ ಎಂದು ಗುರುತಿಸಲಾಯಿತು. ಸದರಿ ದೃಶ್ಯಾವಳಿಗಳಲ್ಲಿ ಕ್ರೂಷರ್‌ನಿಂದ ಅಪಘಾತವಾದ ಬಗ್ಗೆ ದೃಶ್ಯ ಇದೆ.

ಸಾಕ್ಷಿಯು ನಿಪಿ-5 & 6 ನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ಕ್ರೂಷರ್ ವಾಹನದ ಚಾಲಕ ಸದರಿ ವಾಹನವನ್ನು ಅತೀವೇಗ & ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದಿದ್ದರಿಂದ ಅಪಘಾತವಾಗಿತ್ತು ಎಂದರೆ ಸರಿ. ನಿಪಿ-5 & 6 ರಲ್ಲಿರುವ ವಾಹನವೇ ಆ ಕ್ರೂಷರ್ ಎಂದರೆ ಸರಿಯಲ್ಲ. ಆ ವಾಹನದ ಸಂ. ಕೆ ಎ 35/ಎ 4276 ಎಂದು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ನಿಪಿ-13 ಎ & ಬಿ ಗಳಲ್ಲಿ ಕ್ರೂಷರ್ ವಾಹನದ ಸಂಖ್ಯೆ & ಚಾಲಕ ಕಾಣುತ್ತಿಲ್ಲ ಎಂದರೆ ಸರಿ. ಆ ವ್ಯಕ್ತಿ ರಸ್ತೆಯನ್ನು ದಾಟುವಾಗ ಅಲ್ಲಿ ಜೀಬ್ರಾ ಕ್ರಾಸ್ & ಯಾವುದೇ ಸಿಗ್ನಲ್ ಇಲ್ಲ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ರಸ್ತೆಯ ಡಿವೈಡರ್ ಇದ್ದು, ಅದನ್ನು ಯಾರೂ ದಾಟಬಾರದೆಂದು ಅದನ್ನು ಹಾಕಿರುತ್ತಾರೆ ಎಂದರೆ ಸರಿ. ಆ ಡಿವೈಡರ್ ನ ಎರಡೂ ಕಡೆಗಳಲ್ಲಿ ಜೀಬ್ರಾ ಲೈನ್ ಇಲ್ಲ ಎಂದರೆ ಸರಿ. ಯಾವುದೇ ವ್ಯಕ್ತಿ ರಸ್ತೆ ದಾಟಬೇಕೆಂದರೆ ರಸ್ತೆಯ ನಿಯಮಾವಳಿಗಳನ್ನು ಪಾಲಿಸಬೇಕು ಎಂದರೆ ಸರಿ.

2. ಮೃತರ ತಪ್ಪಿನಿಂದಲೇ ಸದರಿ ಅಪಘಾತ ಆಗಿತ್ತು ಎಂದರೆ ಸರಿಯಲ್ಲ. ರಸ್ತೆ ದಾಟುತ್ತಿರುವ ಇಬ್ಬರೂ ಫೋನಿನಲ್ಲಿ ಸಂಭಾಷಣೆ ಮಾಡುತ್ತಾ ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಅಲ್ಲಿ ಯಾವಾಗಲೂ ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಸದರಿ ವ್ಯಕ್ತಿ ವಾಹನಗಳು ಹೋಗುತ್ತಿರುವಾಗಲೇ ನುಸುಳಿಕೊಂಡು, ತಪ್ಪಿಸಿಕೊಂಡು ಹೋಗುತ್ತಿದ್ದಾನೆ ಎಂದರೆ ಸರಿ. ಅಷ್ಟು ವಾಹನಗಳಲ್ಲಿ ಯಾವ ವಾಹನ ಡಿಕ್ಕಿ ಪಡಿಸಿತ್ತು ಎಂದು ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ.

3. ಮೃತರ ಸ್ವಂತ ತಪ್ಪಿನಿಂದಲೇ ಸದರಿ ಅಪಘಾತ ಆಗಿತ್ತು, ಆರೋಪಿಯ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಆಗ ನಾನು ಅಪಘಾತ ಸ್ಥಳದಿಂದ 30 ಮೀ. ದೂರದಲ್ಲಿದ್ದೆ.

4. ಅಪಘಾತ ಆದಾಗ ನಾನು ಬಟ್ಟೆ ಅಂಗಡಿಯ ಒಳಗಡೆ ಇದ್ದೆ. ಅಪಘಾತದ ಶಬ್ದ ಕೇಳಿ ನಾನು ಹೊರಗಡೆ ಬಂದಿದ್ದೆ. ಆದ್ದರಿಂದ ನೀವು ಅಪಘಾತವನ್ನು ಕಣ್ಣಾರೆ ಕಂಡಿಲ್ಲ, ಅಲ್ಲಿದ್ದ ಜನರು ಹೇಳಿದ ಮೇರೆಗೆ ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

5. ಮೃತರಿಗೆ ಉಸಿರಾಟದ ತೊಂದರೆ ಇತ್ತು, ಅದರಿಂದ ಅವರು ಮೃತರಾಗಿದ್ದಾರೆ, ಅಪಘಾತದಿಂದ ಆದ ಗಾಯಗಳಿಂದ ಅಲ್ಲ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಪರಿಹಾರ ದೊರಕಿಸಿಕೊಡಲು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮೃತರು ನಿಮ್ಮ ಸ್ನೇಹಿತ ಇರುವುದರಿಂದ ಅವರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**